# ಸುದ್ದಿ ಸಂಚಯ

## ಪೊನ್ನಂಪೇಟೆಯಲ್ಲಿ ಅಮೃತಮಹೋತ್ಸವ



*ಎಡದಿಂದ ಬಲಕ್ಕೆ, ಡಾ.ಪ್ರಭುಶಂಕರ, ಸ್ವಾಮಿ ಪುರುಷೋತ್ತಮಾನಂದಜಿ, ಸ್ವಾಮಿ ಗೌತಮಾನಂದಜಿ, ಶ್ರೀ ಟಿ.ಎನ್.ಚತುರ್ವೇದಿ, ಸ್ವಾಮಿ ಶಿವಮಯಾನಂದಜಿ, ಸ್ವಾಮಿ ತತ್ತ್ವಬೋಧಾನಂದಜಿ ಮತ್ತು ಸ್ವಾಮಿ ಜಗದಾತ್ಮಾನಂದಜಿ*

**ಕೊಡಗು** ಜಿಲ್ಲೆಯಲ್ಲಿರುವ ಪೊನ್ನಂಪೇಟೆಯ ಶ್ರೀರಾಮಕೃಷ್ಣ ಶಾರದಾಶ್ರಮವು ತನ್ನ ಸಾರ್ಥಕ ಸೇವೆಯ ೭೫ನೆ ವರ್ಷದ ಅಮೃತ ಮಹೋತ್ಸವವನ್ನು ೨೦೦೨ರ ನವೆಂಬರ್ ೨೨, ೨೩ ಮತ್ತು ೨೪ರಂದು ಆಚರಿಸಿತು. ೨೨ರಂದು ಸಂಜೆ ೪ರಿಂದ ೬ ಗಂಟೆಯವರೆಗೆ ಸಮಾರಂಭದ ಉದ್ಘಾಟನಾ ಕಾರ್ಯಕ್ರಮ. ಮೈಸೂರು ರಾಮಕೃಷ್ಣ ಆಶ್ರಮದ ಹಿರಿಯ ಸನ್ಯಾಸಿಗಳಾದ ಸ್ವಾಮಿ ಸುರೇಶಾನಂದಜಿಯವರು ಅದರ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ರಾಮಕೃಷ್ಣ ಮಹಾಸಂಘದ ಸಹಕಾರ್ಯದರ್ಶಿಗಳಾದ ಸ್ವಾಮಿ ಶಿವಮಯಾನಂದಜಿಯವರೂ ಸಂಘದ ಟ್ರಸ್ಟಿಗಳೂ, ಕಾಶಿಪುರ ರಾಮಕೃಷ್ಣಮಠದ ಅಧ್ಯಕ್ಷರೂ ಆಗಿರುವ ತತ್ತ್ವಬೋಧಾನಂದಜಿಯವರೂ ಭಾಗ ವಹಿಸಿದ್ದರು. ಕರ್ನಾಟಕ ಸರ್ಕಾರದ ಮುಜರಾಯ್ ಮಂತ್ರಿಗಳಾದ ಶ್ರೀಮತಿ ಸುಮಾ ವಸಂತ ಅವರು ಸಮಾರಂಭವನ್ನು ಉದ್ಘಾಟಿಸಿದರು. ಸಂಜೆ ೬ರಿಂದ ೮ ಘಂಟೆಯವರೆಗೆ ಶ್ರೀ ಭದ್ರಗಿರಿ ಅಚ್ಯುತದಾಸರು ತಮ್ಮ ಹರಿಕಥೆಯ ಮೂಲಕ ಜನಸ್ತೋಮವನ್ನು ರಂಜಿಸಿದರು.

೨೩ನೆ ದಿನಾಂಕದ ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ಸ್ವಾಮಿ ತತ್ತ್ವಬೋಧಾನಂದಜಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸ್ವಾಮಿ ಶಿವಮಯಾನಂದಜಿಯವರೂ ಅಬ್ಕಾರಿ ಸಚಿವರಾದ ಶ್ರೀ ಎಂ.ಎಂ. ನಾಣಯ್ಯನವರೂ ಕೊಡಗುಜಿಲ್ಲೆಯ ಡೆಪ್ಯುಟಿ ಕಮಿಷನರಾದ ಶ್ರೀ ಬಿ.ಆರ್. ಪಾಲಾಕ್ಷ ಅವರೂ ಭಾಗವಹಿಸಿದ್ದರು. ಅಂದಿನ ಸಾಂಸ್ಕೃತಿಕ ಕಾರ್ಯಕ್ರಮ ಸ್ಥಳೀಯ ಶಾಲೆ ಮತ್ತು ಸಂಸ್ಥೆಗಳ ಬಳಗದವರಿಂದ. ೨೪ರಂದು ಬೆಳಗ್ಗೆ ೧೦.೩೦ರಿಂದ ಮಧ್ಯಾಹ್ನ ೧೨ ಘಂಟೆಯವರೆಗೆ ಬೆಳಗಾಂ ರಾಮಕೃಷ್ಣ ಮಿಷನ್ ಆಶ್ರಮದ ಕಾರ್ಯದರ್ಶಿಗಳಾದ ಸ್ವಾಮಿ ಪುರುಷೋತ್ತಮಾನಂದಜಿಯವರು ಗಾನ-ಪ್ರವಚನ ನೀಡಿದರು. ವಿಷಯ: **ಕಬೀರ ಬೀರಿದ ಬೆಳಕು.**

ಅದೇ ದಿನ ಸಂಜೆಯ ಕಾರ್ಯಕ್ರಮದಲ್ಲಿ ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಗೌತಮಾನಂದಜಿಯವರು ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ರಾಜ್ಯಪಾಲರಾದ ಸನ್ಮಾನ್ಯ ಟಿ.ಎನ್. ಚತುರ್ವೇದಿಯವರು ಮುಖ್ಯ ಅತಿಥಿಗಳಾಗಿದ್ದರು. ಗೌರವ ಅತಿಥಿಗಳಾಗಿ ಖ್ಯಾತ ಸಾಹಿತಿಗಳಾದ ಡಾ.ಪ್ರಭುಶಂಕರ ಭಾಗವಹಿಸಿದ್ದರು. ಅಂದಿನ ಸಾಂಸ್ಕೃತಿಕ ಕಾರ್ಯಕ್ರಮ : ಉಡುಪಿಯ ಯಕ್ಷರಂಗದವರಿಂದ ಯಕ್ಷಗಾನ. ❖

## ಶ್ರೀರಾಮಕೃಷ್ಣ ಆಶ್ರಮ, ಮೈಸೂರಿನಲ್ಲಿ, ಹೊಸ ಪ್ರಕಟನೆಗಳ ಬಿಡುಗಡೆ

**ಮೈ**ಸೂರಿಗೆ ಆಗಮಿಸಿದ್ದ ಕೊಲ್ಕತದ ಕಾಶಿಪುರದಲ್ಲಿನ ರಾಮಕೃಷ್ಣ ಮಠದ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ತತ್ತ್ವಬೋಧಾನಂದಜಿಯವರು ಮೈಸೂರಿನ ಶ್ರೀರಾಮಕೃಷ್ಣಾಶ್ರಮದ ಸಭಾಂಗಣದಲ್ಲಿ ೨೧.೧೧.೨೦೦೨ರಂದು ಸಂಜೆ ಮೂರು ನೂತನ ಪ್ರಕಟನೆ ಗಳನ್ನು ಬಿಡುಗಡೆ ಮಾಡಿದರು. **ದೈನಂದಿನ ಚಿಂತನೆ - ಪ್ರಾರ್ಥನೆ** ಎಂಬ ಸ್ವಾಮಿ ಪರಮಾನಂದರ *Book of Daily Thoughts and Prayers* ನ ಕನ್ನಡಾನುವಾದವನ್ನೂ **ಕರ್ಮಯೋಗ ಸಾಧನೆ** ಎಂಬ ಸ್ವಾಮಿ ಭಜನಾನಂದರು ಬರೆದಿರುವ *Work as a Spiritual Discipline* ಶೀರ್ಷಿಕೆಯ ಲೇಖನಮಾಲೆಗಳ ಕನ್ನಡಾನುವಾದವನ್ನೂ **ಮಕ್ಕಳಿಗಾಗಿ ಸಚಿತ್ರ ಕಥೆಗಳು** -೩ *Pictorial Stories for Children*-vol.3 ಯ ಕನ್ನಡಾನುವಾದನ್ನೂ ಬಿಡುಗಡೆಮಾಡುತ್ತ ತಮ್ಮ ಆಶೀರ್ವಚನದಲ್ಲಿ, "ಶ್ರೀರಾಮಕೃಷ್ಣರನ್ನು ಸ್ವಾಮಿ ವಿವೇಕಾನಂದರು ಧರ್ಮಸಂಸ್ಥಾಪನೆಗಾಗಿ ಅವತರಿಸಿದವರೆಂದು ಹೇಳಿದ್ದಾರೆ. ಆದರೆ ಶ್ರೀರಾಮಕೃಷ್ಣರ ಧರ್ಮಸಂಸ್ಥಾಪನೆಯಲ್ಲಿ ವೈಶಿಷ್ಟ್ಯವಿತ್ತು ಯಾವ ದುಷ್ಟರನ್ನೂ ಸಂಹಾರಮಾಡಲಿಲ್ಲ. ಬದಲಾಗಿ ಅವರನ್ನು ಪರಿವರ್ತಿಸಿದರು. ಆ ಪರಿವರ್ತನೆಗಾಗಿ ಅವರು ಉಪಯೋಗಿಸಿದ ಅಸ್ತ್ರಪ್ರೇಮ, ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಸ್ವಾಮಿ ಶಿವಮಯಾನಂದಜಿ, ಸಹಾಯಕ ಕಾರ್ಯದರ್ಶಿಗಳು, ರಾಮಕೃಷ್ಣ ಮಠ ಹಾಗೂ ರಾಮಕೃಷ್ಣ ಮಿಷನ್, ಬೇಲೂರು ಮಠ, ಅವರು ಮಾತನಾಡುತ್ತಾ, " "ಸ್ವಾಮಿ ವಿವೇಕಾನಂದರು ತಿಳಿಸಿರುವಂತೆ ನಮಗೆ ತತ್ತ್ವವೂ ಬೇಕು ವ್ಯಕ್ತಿಯೂ ಬೇಕು. ಆದರೆ ಸಾಮಾನ್ಯ ಜನತೆಗೆ ಆ ತತ್ತ್ವಗಳ ಸಾಕಾರ ಮೂರ್ತಿಯಾಗಿರುವ ಆರಾಧ್ಯದೈವ ಬೇಕು. ಶ್ರೀರಾಮಕೃಷ್ಣರಲ್ಲಿ ಶ್ರೇಷ್ಠತಮವಾದ ತತ್ತ್ವಗಳು ಘನವಾಗಿ ಮೂರ್ತೀಭವಿಸಿವೆ. ಆದ್ದರಿಂದಲೇ ನಮಗೆ ಶ್ರೀರಾಮಕೃಷ್ಣರು ತತ್ತ್ವವೂ ಹೌದು ವ್ಯಕ್ತಿಯೂ ಹೌದು, ಎಂದು ತಿಳಿಸಿದರು. ❊